# ಕೋಆರ್ಡ್ ಸೆಟ್ ಎಲ್ಲರಿಗೂ ಬೆಸ್ಟ್!



**ಫ್ಯಾಷನ್ ಲೋಕದಲ್ಲಿ ಉಡುಪುಗಳ ಟ್ರೆಂಡ್ ಬದಲಾಗುತ್ತಲೇ ಇರುತ್ತದೆ. ಅದರಲ್ಲೂ ನಿನ್ನೆಯಿದ್ದ ಟ್ರೆಂಡ್ ಇವತ್ತು ಔಟ್‌ಡೇಟೆಡ್ ಆಗುವುದು ಸಹಜ. ಸದ್ಯ ಕೋಆರ್ಡ್ ಸೆಟ್ ಚಾಲ್ತಿಗೆ ಬಂದಿದ್ದು, ಎಲ್ಲಾ ವಯಸ್ಸಿನವರಿಗೂ ಸೂಕ್ತವಾಗಿದೆ.**

**■ ಶ್ವೇತಾ ಕೃಷ್ಣಮೂರ್ತಿ**

ಟಾಪ್ ಟು ಬಾಟಮ್ ಒಂದೇ ಕಲರ್ ಡ್ರೆಸ್... ಆಫೀಸಿಗಾದ್ರೆ ಸಿಂಪಲ್ಲಾದ ಉಡುಗೆ. ಕಾಲೇಜಿಗಾದ್ರೆ ಕಲರ್‌ಫುಲ್ ದಿರಿಸು. ನೀವು ಪ್ರವಾಸಕ್ಕೆ ತೆರಳುತ್ತಿದ್ದೀರಾ? ಅದಕ್ಕೂ ಸರಿ ಹೊಂದುತ್ತದೆ ಈ ಟ್ರೆಂಡಿ ಉಡುಗೆ. ಇದೇ ಕೋಆರ್ಡ್ ಸೆಟ್. ಚಿಕ್ಕಮಕ್ಕಳಿಂದ ಹಿಡಿದು ವಯಸ್ಕರ ಮನಸ್ಸನ್ನು ಗೆದ್ದಿರುವ ಈ ಕೋಆರ್ಡ್ ಸೆಟ್ ಮತ್ತೆ ಟ್ರೆಂಡ್‌ನಲ್ಲಿದೆ. ಗಾಢ ಹಾಗೂ ತಿಳಿ ಬಣ್ಣಗಳೆರಡರಲ್ಲೂ ಮನಸೆಳೆಯುವ ಈ ಉಡುಪು, ಮಾನಿನಿಯರ ಮನ ಗೆದ್ದಿದೆ. ಅಷ್ಟಕ್ಕೂ ಏನಿದು ಕೋಆರ್ಡ್ ಸೆಟ್ ಮಾಯೆ? ಈ ಟ್ರೆಂಡ್ ಸೃಷ್ಟಿಯಾಗಿರುವ ಹಿಂದಿನ ಕಥೆ ಏನು?

## ಕ್ರೀಡೆಯ ನಂಟು

ಕೋ ಆರ್ಡ್ ಸೆಟ್ ಮೊದಲು ಮಾರುಕಟ್ಟೆಗೆ ಬಂದದ್ದು 19ನೇ ಶತಮಾನದಲ್ಲಿ. ಆಗಷ್ಟೇ ಕ್ರೀಡಾಲೋಕದಲ್ಲಿ ಮಿಂಚಲು ತಯಾರಾಗಿದ್ದ ಲಲನೆಯರಿಗಾಗಿ ತಯಾರಿಸಲಾದ ಉಡುಪಿದು. ಮುಖ್ಯವಾಗಿ ಟೆನಿಸ್ ಮತ್ತು ಗಾಲ್ಫ್ ಆಡಲೆಂದು ತಯಾರಿಸಿದ ಈ ಉಡುಗೆಯನ್ನು ಕಾಟನ್ ಮತ್ತು ಲೆನಿನ್ ಬಟ್ಟೆಯಲ್ಲಿ ತಯಾರು ಮಾಡಲಾಗಿತ್ತು. ಈ ಉಡುಪು ನೋಡಲು ಸುಂದರವಾಗಿದ್ದಷ್ಟೇ ಅಲ್ಲದೆ ಧರಿಸಲೂ ಹಿತಕರವಾಗಿತ್ತು. ಇದೇ ಕಾರಣದಿಂದ 1960ರ ಹೊತ್ತಿಗೆ, ಈ ರೀತಿಯ ಉಡುಗೆ ಹೊಸ ಹೊಸ ರೂಪದಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟಿತು.

ಮೊದಲು ಸರಳವಾಗಿದ್ದ ಈ ದಿರಿಸು, ನಂತರ ಗಾಢ ಬಣ್ಣ ಹಾಗೂ ಗ್ರಾಫಿಕ್ ಪ್ರಿಂಟ್‌ಗಳ ಮೂಲಕ ಹೊಸ ಟ್ರೆಂಡ್ ಸೃಷ್ಟಿ ಮಾಡಿತ್ತು. ಮ್ಯಾಚಿಂಗ್ ಟಾಪ್ ಮತ್ತು ಸ್ಕರ್ಟ್ ನೋಡಲು ಎಷ್ಟು ಟ್ರೆಂಡಿಯಾಗಿತ್ತೋ, ಅಷ್ಟೇ ಆರಾಮದಾಯಕವಾಗಿದ್ದರಿಂದ ಹೆಂಗಳೆಯರು ಇದನ್ನು ನಾನಾ ರೀತಿಯಲ್ಲಿ ಸ್ಟೈಲ್ ಮಾಡಿ, ದಶಕದ ಫ್ಯಾಷನ್ ಸ್ಟೇಟ್‌ಮೆಂಟ್ ಆಗಿ ಬದಲಿಸಿದರು.

1970ರಲ್ಲಿ ಈ ಕೋಆರ್ಡ್ ಸೆಟ್, ಡಿಸ್ಕೋ ಫ್ಯಾಷನ್ ಲೋಕಕ್ಕೆ ಪದಾರ್ಪಣೆ ಮಾಡಿತ್ತು. ಗ್ಲಾಮರ್ ಜಗತ್ತಲ್ಲಿ